ಅಧ್ಯಕ್ಷರು : ಮರಿಯನ್ನು ಒಪ್ಪಿಸಲಾಯಿತು. ಶ್ರೀ ನಾಗರಾಜ್‌ರವರೇ, ಈಗ ಹೇಳಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಹಳ್ಳಿಗಾಡಿನ ಜನತೆಗೆ ವಿದ್ಯುಚ್ಛಕ್ತಿಯನ್ನು ಒಂದು ದಿನಕ್ಕೆ 6 ಗಂಟೆ ಕಾಲ ನಿಲ್ಲಿಸಿರುವುದರ ಬಗ್ಗೆ ಪ್ರಸ್ತಾಪ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡಿನ ಜನತೆಗೆ ವಿದ್ಯುಚ್ಛಕ್ತಿಯನ್ನು ಒಂದು ದಿನಕ್ಕೆ ಆರು ಗಂಟೆ ಕಾಲ ನಿಲ್ಲಿಸಿದ್ದಾರೆ. ಈ ಪ್ರಕಾರ ನಿಲ್ಲಿಸಿರುವುದರಿಂದ ಗ್ರಾಮೀಣ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ. ಸಂಬಂಧಪಟ್ಟ ಮಂತ್ರಿಗಳು ಯಾರೂ ಕೂಡ ನಮಗೆ ಕಾಣುತ್ತಿಲ್ಲ, ಅವರು ಇಲ್ಲಿ ಇರಬೇಕಾದದ್ದು ಬಹಳ ಸೂಕ್ತ ಇದೆ.

ಅಧ್ಯಕ್ಷರು : ಅವರಿಗೆ ತಿಳಿಸಿಲ್ಲವಲ್ಲ?

ಶ್ರೀ ಸಿ. ಬೈರೇಗೌಡ : ನಿನ್ನೆ ಈ ವಿಚಾರ ಬಂದಿತ್ತು.

ಅಧ್ಯಕ್ಷರು : ಇವತ್ತು ಹೇಳುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ, ಅದರಂತೆ ಅವಕಾಶ ಕೊಟ್ಟಿದ್ದೇನೆ.

ಶ್ರೀ. ಕೆ.ಎಸ್. ಈಶ್ವರಪ್ಪ : ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಸಿ. ಬೈರೇಗೌಡ : ನಾವು ಸುಮ್ಮನೆ ಹೇಳಿಹೋಗುವುದಕ್ಕೆ ಏಕೆ ಈ ಸಭೆಗೆ ಬರಬೇಕು? ಮುಖ್ಯವಾಗಿ ಹಳ್ಳಿಗಾಡಿನ ಜನತೆಗೆ ಅನುಕೂಲವಾಗಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಅವರಿಗೆ ತಿಳಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಇದು ಬಹಳ ತೀವ್ರವಾದ ಸಮಸ್ಯೆ. ತತ್‌ಕ್ಷಣ ಇದನ್ನು ಸರಿಪಡಿಸುತ್ತೇವೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಬೇಕಾಗುತ್ತದೆ. ತಾವು ಇದನ್ನು ಹೇಳುವುದಕ್ಕೆ ಅಪ್ಪಣೆ ಕೊಡಿಸಿದ್ದೀರಿ, ಸಂತೋಷ. ಬರೇ ಹೇಳಬೇಕು ಎನ್ನುವ ಕಾರಣಕ್ಕಾಗಿ ಹೇಳುವುದಕ್ಕೆ ನಾವು ತಯಾರಿಲ್ಲ, ಅದಕ್ಕಿಂದ ಹೆಚ್ಚಾಗಿ ಕ್ರಮ ತೆಗೆದುಕೊಳ್ಳಬೇಕಾದದ್ದು ನಮಗೆ ಮುಖ್ಯ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಕಡೆಯಿಂದ ಮಂತ್ರಿಗಳು ಇದ್ದಾರೆ. ಯಾರು ಸಚಿವರು ಇಲ್ಲಿದ್ದಾರೆ. ಅವರು ಉತ್ತರ ಕೊಟ್ಟರೆ ನಮ್ಮ ಅಭ್ಯಂತರ ಇಲ್ಲ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡತಕ್ಕದ್ದು ಏನೆಂದರೆ, ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಆರಾರು ಗಂಟೆ ವಿದ್ಯುಚ್ಛಕ್ತಿ ನಿಲ್ಲಿಸಿರುವುದರಿಂದ ಬರೇ ನನ್ನ ಒಂದು ತಾಲ್ಲೂಕಿನಲ್ಲೇ ಒಂದು ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತಿದೆ. ಇಡೀ ಕರ್ನಾಟಕದಲ್ಲಿ ಈ ರೀತಿ ಆಗತಕ್ಕಂಥ ನಷ್ಟ ಸುಮಾರು ನೂರಾರು ಕೋಟಿ ಬೆಳೆ ನಷ್ಟ ಆಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ವಿದ್ಯುಚ್ಛಕ್ತಿ ಮಂಡಳಿಯವರು ಗ್ರಾಮಾಂತರ ಪ್ರದೇಶಗಳಿಗೆ ಒಂದು ರೀತಿಯ ಗಧಾ ಪ್ರಹಾರ ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ನಿಲುಗಡೆಯನ್ನು ರದ್ದುಮಾಡಿ ಮೊದಲು ಹೇಗೆ ಇತ್ತು, ಆ ಪ್ರಕಾರವೇ

ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ತಮ್ಮ ಮೂಲಕ ಅವರನ್ನು ಕೇಳುತ್ತೇನೆ.

+ ಶ್ರೀ ಸಿ. ಭೈರೇಗೌಡ (ವೇಮಗಲ್) : ಈ ರೀತಿ ಲೋಡ್ ಶೆಡ್ಡಿಂಗ್ ಮಾಡತಕ್ಕದ್ದು ಇದೇನೂ ಪ್ರಥಮ ಅಲ್ಲ. ಹಿಂದೆ ಅನೇಕ ಸಲ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರೈತರು ಸಹಕರಿಸುವುದಕ್ಕೆ ಹಿಂದೆ ಬಿದ್ದಿಲ್ಲ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಹಿಂದೆ ಇದ್ದುದಕ್ಕೂ ಈಗ ಇರುವುದಕ್ಕೂ ವ್ಯತ್ಯಾಸ ಇದೆ. ನಮ್ಮ ಅನುಭವದ ಪ್ರಕಾರ, ಹೇಳಬೇಕೆಂದರೆ ನಾಲ್ಕಾರು ವರ್ಷಗಳಿಂದ ನಾವು ಇದನ್ನು ಅನುಭವಿಸುತ್ತಲೇ ಬಂದಿದ್ದೇನೆ. ಲೋಡ್ ಶೆಡ್ಡಿಂಗ್ ಮಾಡುವುದಿದ್ದರೂ ಬೆಳಿಗ್ಗೆ ಆರು ಗಂಟೆಯಿಂದ 12 ಗಂಟೆವರೆಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ 12ರಿಂದ ಸಂಜೆ ಆರು ಗಂಟೆವರೆಗೆ ನಿಲ್ಲಿಸುತ್ತಾರೆ. ಇದು ಪ್ರತಿವಾರವೂ ಕೂಡ ಬದಲಾವಣೆಯಾಗುತ್ತದೆ, ಈಗ ಇರತಕ್ಕಂಥ ಪದ್ಧತಿ ಪ್ರಕಾರ. ಆದರೆ ಲೋಡ್ ಶೆಡ್ಡಿಂಗ್ ಮಾಡಿದರೂ ಕೂಡ ವೋಲ್ಟೇಜ್ ಇರುವುದಿಲ್ಲ. 24 ಗಂಟೆಯೂ ನಮಗೆ ಕರೆಂಟ್ ಬೇಡ. ಆದರೆ ಉಳಿದ 18 ಗಂಟೆಗಳಲ್ಲಾದರೂ ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಇದು ಅವರ ಗಮನಕ್ಕೆ ಹೋಗಬೇಕಾಗುತ್ತದೆ. 24 ಗಂಟೆಯಲ್ಲಿ 18 ಗಂಟೆಯಾದರೂ ಸರಿಯಾದ ವೋಲ್ಟೇಜ್ - ಅನ್‌ಇಂಟರೆಪ್ಟೆಡ್ ಸಪ್ಲೈ ಯಾವುದೂ ಆಗಿಲ್ಲ, ಅದರ ಜೊತೆಗೆ ಆರು ಗಂಟೆಗೆ ನಿಲ್ಲಿಸಬೇಕೆಂದು ಮಾಡುತ್ತಿದ್ದಾರೆ. ಮತ್ತೊಂದು ಏನೆಂದರೆ, ಈಗ ಪರೀಕ್ಷೆ ಕಾಲ ಬರುತ್ತಿದೆ. ವಿದ್ಯಾಭ್ಯಾಸ ಮೊದಲೇ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ವನಾಶವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಾಯಂಕಾಲದರೆಗೆ ವಿದ್ಯುಚ್ಛಕ್ತಿಯನ್ನು ನಿಲುಗಡೆ ಮಾಡಿದರೆ ಆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮಕ್ಕಳ ಪರಿಸ್ಥಿತಿ ಏನಾಗಬೇಕು?

ಇವತ್ತು ನಮ್ಮ ಜಿಲ್ಲೆಯಲ್ಲಿ ಇರತಕ್ಕ ಪರಿಸ್ಥಿತಿ ಅಂದರೆ ಕುಡಿಯುವ ನೀರು ಸಹ ಸಿಕ್ಕುವುದಿಲ್ಲ, ವಿದ್ಯುತ್ ಇಲ್ಲದಿದ್ದರೆ ಕುಡಿಯುವುದಕ್ಕೆ ನೀರೂ ಇಲ್ಲ. ಸುಮಾರು ಐದುನೂರು ಅಡಿಗೂ ಮೇಲ್ಪಟ್ಟು ಆಳದಿಂದ ನೀರನ್ನು ತರುತ್ತಿದ್ದೇವೆ. ನೂರಾರು ಎಕರೆಯಲ್ಲಿ ಆಲೂಗಡ್ಡೆ ಬೆಳೆ ಇದೆ. ಈ ಸಲದ ಬೆಳೆ ಪರಿಸ್ಥಿತಿ ವಿಚಿತ್ರವಾದಂತಾದ್ದು. ಯಾವ ವರ್ಷವೂ ಇಷ್ಟು ಬೆಲೆಯಾಗಿರಲಿಲ್ಲ. 80ಕೆ.ಜಿ.ಮೂಟೆಗೆ, ಎಂಟುನೂರು ರೂಪಾಯಿ ಕೊಡುತ್ತಿದ್ದೇವೆ. ನೂರಾರು ಎಕರೆಯಲ್ಲಿ ಆಲೂಗಡ್ಡೆ ಹಾಕಿದ್ದಾರೆ. ಪಂಜಾಬ್‌ನಲ್ಲಿ ಎಂತಹ ಪರಿಸ್ಥಿತಿ ಇದೆ, ಆಲ್ಲಿರತಕ್ಕ ಬಂದೂಕು, ಗುಂಡುಗಳನ್ನು ಎದುರಿಸಿ,ನಮ್ಮ ಜನ ಅಲ್ಲಿಂದ ಬಿತ್ತನೆ ಆಲೂಗಡ್ಡೆ ತರುತ್ತಿದ್ದಾರೆ. ನಮ್ಮ ರೈತರು ಒಂದು ಕೆ.ಜಿ.ಗೆ 10 ರೂಪಾಯಿ ಕೊಡುತ್ತಿದ್ದಾರೆ. ಇಷ್ಟೊಂದು ಹಣ ಖರ್ಚುಮಾಡಿ, ನೀರು ಇಲ್ಲದಿದ್ದರೆ, ರೈತರ ಪರಿಸ್ಥಿತಿ ಏನಾಗಬೇಕು? ಒಂದು ಎಕರೆಯಲ್ಲಿ ಆಲೂಗೆಡ್ಡೆ ಹಾಕಬೇಕಾದರೆ 5-6 ಸಾವಿರ ರೂಪಾಯಿ ಖರ್ಚಾಗುತ್ತದೆ. ಇಂತಾದ್ದು, ನಮ್ಮ ಜಿಲ್ಲೆಯಲ್ಲಿ 25-30 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಹಾಕಿದ್ದಾರೆ ; ಜನ ಬದುಕಬೇಕೆಂಬ ಆಸೆಯಿಂದ ಈ ಬೆಳೆ ಹಾಕಿದ್ದಾರೆ. ಆದರೆ ಈ ರೀತಿಯಾಗಿ ವಿದ್ಯುತ್ ನಿಲುಗಡೆ ಮಾಡುವುದರಿಂದ, ಬೆಳೆ ಸರ್ವನಾಶವಾಗುವುದಲ್ಲಿ ಅನುಮಾನವೇ ಇಲ್ಲ. ಅದೇ ರೀತಿಯಲ್ಲಿ, ನಾನು ಆಗಲೇ ಹೇಳಿದ ಹಾಗೆ, ಕುಡಿಯುವ ನೀರಿಗೂ ಅನೇಕ ಅಡಚಣೆಗಳು, ತೊಂದರೆಗಳು ಇಂದು ಆಗುತ್ತಿವೆ. ಅನೇಕ ಕಡೆ ಸಬ್ ಸಬ್ ಸ್ಟೇಷನ್ ಆಗಬೇಕಾಗಿದೆ, ಇದರ ಬಗ್ಗೆ ನಾವು ಸತತವಾಗಿ ಇಲ್ಲಿ ಹೇಳುತ್ತಿದ್ದೇವೆ. ಸಬ್

ಸ್ಟೇಷನ್ ಆಗುತ್ತಾ ಇಲ್ಲ, ಗ್ರಾಮೀಣ ಪ್ರದೇಶದ, ಕೆಲವು ಕಡೆಗಳಲ್ಲಿ ನಾವು ಊದುಬತ್ತಿ ಹಚ್ಚಿಸಿದರೆ ಆದು ಯಾವ ರೀತಿ ಉರಿಯುತ್ತದೆಯೋ, ಆದೇ ರೀತಿಯಾಗಿ ವಿದ್ಯುತ್ ದೀಪಗಳು ಉರಿಯುತ್ತವೆ. ಇದು ಈಗಲೂ ಇರತಕ್ಕ ಸಮಸ್ಯೆ. ಇದನ್ನು ಬಗೆಹರಿಸಬೇಕಾಗಿರುವುದು ಸರ್ಕಾರದ ಕರ್ತವ್ಯ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ 6 ಗಂಟೆಯಿಂದ ಸಂಜೆ 12 ಗಂಟೆಯವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡುವಂಥ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ನಾನು ಹೇಳುವಂತಾದ್ದು, ಆ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದ್ದರೆ, ಯಾವ ಸಮಯದಲ್ಲಿ ವಿದ್ಯುತ್ ನಿಲ್ಲಿಸಬಹುದು ಎಂಬ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕಾಗಿತ್ತು, ಅಥವಾ ಸದನದ ಒಳಗಡೆ ಚರ್ಚೆ ಬೇಡ ಎಂದರೆ, ಸನ್ಮಾನ್ಯ ಸಚಿವರು, ಅವರ ಕೊಠಡಿಗೆ ಕರೆದು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬಹುದಿತ್ತು. ಈ ಹೌಸನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ, ವಿರೋಧ ಪಕ್ಷದವರ ಜೊತೆ ಚರ್ಚೆಯನ್ನೂ ಮಾಡದೇ, ಸದನದ ಕಾರ್ಯಕಲಾಪ ನಡೆಯುವ ಈ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪಿಸಬೇಕಾಗಿದೆ. ಗ್ರಾಮೀಣ ಜನರು ಅನೇಕ ಸಮಸ್ಯೆಗಳಿಂದ ತೊಳಲಾಡುತ್ತಿರುವ ಈ ಸಮಯದಲ್ಲಿ, ಅಲ್ಲೊಂದು, ಇಲ್ಲೊಂದು ಬೋರ್‌ವೆಲ್ ಹಾಕಿಕೊಂಡು, ಭೀಕರ ಬರಗಾಲವಿದ್ದರೂ ಸ್ವಲ್ಪ ಬೆಳೆಯನ್ನು ಬೆಳೆಯುವುದಕ್ಕೂ ಗ್ರಾಮೀಣ ಪ್ರದೇಶಗಳಲ್ಲಿ ಅನಾನುಕೂಲವಾಗಿದೆ. ಸರ್ಕಾರ ಒಪ್ಪಿರುವ ಪ್ರಾಕಾರ 15 ಜಿಲ್ಲೆಗಳಲ್ಲಿ ಒಂದುನೂರು ತಾಲ್ಲೋಕುಗಳಲ್ಲಿ ಬರಗಾಲ ಇದೆ. ಮಿನಿ ವಾಟರ್ ಸಪ್ಲೈ ಮಾಡಿಕೊಂಡು ಕುಡಿಯುವ ನೀರಿನ ಅನುಕೂಲ ಮಾಡಿಕೊಳ್ಳಲಾಗಿದೆ. ಇಂತಹ ಸನ್ನಿವೇಶದಲ್ಲಿ 6 ಗಂಟೆಗಳ ಕಾಲ ವಿದ್ಯುತ್ ಹೊರಟುಹೋದರೆ ಬೋರ್‌ವೆಲ್ ನೀರೂ ಕೂಡ ಬರುವುದಿಲ್ಲ ರೂರಲ್ ವಾಟರ್ ಸಪ್ಲೈ ಮೂಲಕ ಸಹ ನೀರನ್ನು ಕೊಡುವುದಕ್ಕಾಗುತ್ತಿಲ್ಲ. ಈ ರೀತಿ ಕುಡಿಯುವ ನೀರಿನ ಸಮಸ್ಯೆ ಒಂದುಕಡೆ ಮತ್ತೊಂದು ಕಡೆ ಮಕ್ಕಳಿಗೆ ಪರೀಕ್ಷೆ ಸಂದರ್ಭ ರೀತಿಯ ಸಂದರ್ಭಗಳು ಬಂದರೂ ಸಹ ಗ್ರಾಮೀಣ ಜನತೆಯ ಮೇಲೆ ಪ್ರಹಾರ ಮಾಡುವಂಥ ಈ ಸರ್ಕಾರದ ಪ್ರವೃತ್ತಿ ಸರಿಯೇ? ಗ್ರಾಮಿಣ ಜನತೆ ಬಗ್ಗೆ ಕೇಳುವವರು ಯಾರೂ ಇಲ್ಲವೆಂದು ಈ ತೀರ್ಮಾನಕ್ಕೆ ಬಂದಿದೆಯೇ? ಇತ್ತೀಚೆಗೆ ಒಂದಾದಮೇಲೆ ಒಂದು ನಿರ್ಧಾರಗಳನ್ನು ತೆಗೆದುಕೊಂಡಿರುವುದನ್ನು ನೋಡಿದರೆ ನಿಜವಾಗಿಯೂ ಸರ್ಕಾರಕ್ಕೆ ಜನಹಿತ ಮಾಡುವಂಥ ಕಳಕಳಿ ಇದೆಯೇ? ಅಥವಾ ಇದನ್ನು ಸರಿಪಡಿಸುವಂಥ ಪ್ರಾಮಾಣಿಕ ಕಾರ್ಯಕ್ರಮ ಇದೆಯೇ. ಈ ವಿದ್ಯುತ್ ನಿಲುಗಡೆಯಿಂದ ಅನೇಕ ಸಮಸ್ಯೆಗಳು ಬರುತ್ತವೆ. ಗ್ರಾಮೀಣ ರೈತ ಇರಬಹುದು ಅಥವಾ ಅಲ್ಲಿ ವಿದ್ಯಾಭ್ಯಾಸ ಮಾಡುವಂಥ ಯುವಕರು ಇರಬಹುದು. ಈ ಕುಡಿಯುವ ನೀರಿನ ಸಮಸ್ಯೆಯಿಂದ ಜನತೆಯ ಮೇಲೆ ಕೆಟ್ಟ ಪರಿಣಾಮ ಆಗುತ್ತಿರತಕ್ಕ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡುತ್ತೇನೆ. ಪಬ್ಲಿಕ್ ಅಂದರೆ ಟೇಕಿಂಗ್ಸ್‌ನಂಥ ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಲೂಟಿಯಾಗುತ್ತಿದ್ದು ಸರ್ಕಾರದ ಬೊಕ್ಕಸ ಖಾಲಿಯಾಗುತ್ತಿದೆ. ಇವುಗಳಿಗೆ ಬೀಗ ಹಾಕಿ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಕೊಡುವಂಥ ವಿದ್ಯುತ್‌ನ್ನು ನಿಲುಗಡೆ ಮಾಡಿ, ಗ್ರಾಮೀಣ ಜನತೆಯ ಮೇಲೆ ಗಮನ ಕೊಡಿ. ಈಗ ಏನು ಕನಿಷ್ಟ ವಿದ್ಯುತ್ ಕೊಡುತ್ತಿದ್ದೀರಿ ವೋಲ್ಟೇಜ್ ಕೂಡ ಡ್ರಾಪ್ ಆಗುತ್ತಿದೆ ಮತ್ತು ವಿದ್ಯುತ್ ಸರಿಯಾಗಿ ಬರುವುದಿಲ್ಲ. ಬೋರ್‌ವೆಲ್‌ಗಳು ಸ್ಟಾರ್ಟ್ ಆಗುವುದಿಲ್ಲ. ಇರತಕ್ಕ ವಿದ್ಯುತ್ ವ್ಯವಸ್ಥೆ ಸರಿ ಇಲ್ಲ. ಈ ಪರಿಸ್ಥಿತಿ ಇರಬೇಕಾದರೆ ಬೇರೆ ಯಾವುದಾದರೂ ತೀರ್ಮಾನ

ತೆಗೆದುಕೊಳ್ಳಿ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ನಿಲ್ಲಿಸಿಯಾದರೂ ಗ್ರಾಮೀಣ ಜನತೆಗೆ ವಿದ್ಯುತ್ ಕೊಡಿ. ನೀವು ಈ ರೀತಿ 6 ಗಂಟೆಗಳ ಕಾಲ ವಿದ್ಯುತ್ ನಿಲ್ಲಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ದಯಮಾಡಿ ಸರ್ಕಾರ ತಕ್ಷಣ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಮತ್ತು ಈ ನಿಲುವನ್ನು ವಾಪಸ್ ತೆಗೆದುಕೊಂಡು ವಿದ್ಯುತ್ ಕೊಡುವಂಥ ಗಟ್ಟಿಯಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಾದ ತಾವೂ ಕೂಡ ನಮ್ಮ ಸಹಾಯಕ್ಕೆ ಬರಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಏಕಾಂತಯ್ಯ (ಚಿತ್ರದುರ್ಗ): ಮಾನ್ಯ ಅಧ್ಯಕ್ಷರೇ ಈಗ ಅಭಾವ ಪರಿಸ್ಥಿತಿ ಇದೆ. 24 ಘಂಟೆ ಕರೆಂಟ್ ಕೊಟ್ಟರೂ ಬೋರ್‌ವೆಲ್‌ನಲ್ಲಿ ಸಕಾದಷ್ಟು ನೀರು ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಆರು ಘಂಟೆಗಳ ಕಾಲ ವಿದ್ಯುಚ್ಛಕ್ತಿ ಕಡಿಮೆ ಮಾಡುತ್ತೇವೆಂದು ಹೇಳುವುದು ಏನಿದೆ ಇದರಿಂದ ರೈತರ ಉತ್ಪಾದನಾ ಶಕ್ತಿ ಕುಂಠಿತರಾಗುತ್ತದೆ ಉತ್ಪಾದನೆಗೂ ತೊಂದರೆಯಾಗುತ್ತದೆ. ಅದರ ಜೊತೆಯಲ್ಲಿ ಮಾನ್ಯ ಯೆಡಿಯೂರಪ್ಪನವರು ಹೇಳಿದಹಾಗೆ ಕೈಗಾರಿಗೋದ್ಯಮಿಗಳಿಗೆ ಬೇಕಾದರೆ ಕಂಡಿತ ಮಾಡಿ ಅವರು ಬೇರೆ ವಿಧವಾಗಿ ಡೀಸೆಲ್ ಸೆಟ್ ಇಟ್ಟುಕೊಂಡು ವಿದ್ಯುಚ್ಛಕ್ತಿ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಅದ್ಯತೆ ಆಧಾರದಮೇಲೆ ಗ್ರಾಮೀಣ ಪ್ರದೇಶದ ರೈತರಿಗೆ ವಿದ್ಯುತ್ ಪೂರೈಕೆ ಮಾಡಬೇಕು. ಅದರಲ್ಲಿ ಯಾವುದೇ ತೊಂದರೆ ಮಾಡಬಾರದು ಇದರ ಬಗ್ಗೆ ಸರಕಾರ ಹೇಳಿಕೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಸನ್ಮಾನ್ಯ ಅಧ್ಯಕ್ಷರೇ 6-8 ತಿಂಗಳಿನಿಂದ ಕೋಟಿಗಟ್ಟಲೆ ಬಾಕಿ ಇರುವ ಕಾರ್ಖಾನೆಗಳಿಂದ ಬಾಕಿಯನ್ನು ವಸೂಲು ಮಾಡಬೇಕೆಂದು ಒತ್ತಾಯ ಮಾಡಿದರೂ ಸಹಿತ ವಸೂಲಿ ಮಾಡಿಲ್ಲ. ಕಾರ್ಖಾನೆ ಮಾಲೀಕರು ಇನ್ನಷ್ಟು ಬಾಕಿ ಇಟ್ಟುಕೊಂಡು ದಿವಾಳಿ ತೆಗೆದು ಸರಕಾರಕ್ಕೆ ಕಾರ್ಖಾನೆಯನ್ನು ಬಿಟ್ಟು ಹೋಗಬೇಕೆಂದು ಅವರ ಮನಸ್ಸಿನಲ್ಲಿ ಇದ್ದಹಾಗೆ ಕಾಣುತ್ತದೆ ಎಂದು ನಮಗನ್ನಿಸುತ್ತದೆ. ಅದುದರಿಂದ ಆ ಇಲೆಕ್ಟ್ರಿಸಿಟಿಯನ್ನು ರೈತರಿಗೆ ಕೊಟ್ಟು ರೈತರನ್ನು ಬದುಕಿಸಬಹುದು. ಇದನ್ನು ಒಪ್ಪಿಕೊಂಡು ಕೋಟ್ಯಾಂತರ ಜನರ ನೆರವಿಗೆ ಬರಬೇಕಾದುದು ಸರಕಾರದ ಕರ್ತವ್ಯ. ಆದ್ದರಿಂದ ಕೋಟಿಗಟ್ಟಲೆ ಬಾಕಿ ಇರುವಂತಹ ಕಾರ್ಖಾನೆಗೆ ಕೆ.ಇ.ಬಿ.ಯವರು ಸಪ್ಲೈ ನಿಲ್ಲಿಸಿ ಅದನ್ನು ಕೋಡಬೇಕೆಂದು ನನ್ನ ಪ್ರಾರ್ಥನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ ಈ ಸರಕಾರಕ್ಕೆ ಕಳೆದ ಒಂದೂವರೆ ವರ್ಷದಿಂದ ನಾವು ವಿಧಾನಸಭೆಗೆ ಗೆದ್ದು ಬಂದ ಮೇಲೆ ಗ್ರಾಮೀಣ ಪ್ರದೇಶಕ್ಕೆ ವಿದ್ಯುತ್ ಕೊಡುವ ಬಗ್ಗೆ ಮತ್ತು ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಆ ಕಡೆಯ ಸದಸ್ಯರು ಈ ಕಡೆಯ ಸದಸ್ಯರು ಬಹಳ ಒತ್ತಾಯ ಮಾಡಿ ಏನಾದರೂ ಮಾಡಿ ಇದನ್ನು ಸರಿ ಮಾಡಬೇಕು ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಮಾಡಿ ಡಿಸ್ಟ್ರೀಬ್ಯೂಷನ್ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡಬೇಕು. ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿಕೊಂಡು ಬಂದಿದ್ದೇವೆ. ಅಂಕಿ ಅಂಶಗಳನ್ನು ಕೊಡಬೇಕೆಂದರೆ ರೈತರು ಖಾಸಗಿ ಆಗಿ ದುಡ್ಡನ್ನು ಸಾಲ ಮಾಡಿಕೊಂಡಿದ್ದಾರೆ. ಸಹಕಾರ ಸಂಘಗಳಿಂದ ಲೆಂಡಿಂಗ್ ತೆಗೆದುಕೊಳ್ಳುವುದು 22 ಪರ್ಸೆಂಟ್ ಮಾತ್ರ ಇನ್ನುಳಿದ 78 ಪರ್ಸೆಂಟ್ ಹಣವನ್ನು ನೂರಕ್ಕೆ 4 ರೂಪಾಯಿ 5 ರೂಪಾಯಿ ಬಡ್ಡಿ ಕೊಟ್ಟು ತೆಗೆದುಕೊಂಡು ಬಂದಿದ್ದಾರೆ ಇದು 60-70

ಪರ್ಸೆಂಟ್ ಆಗುತ್ತದೆ. ಈ ರೀತಿ ತೆಗೆದುಕೊಂಡು ಬಂದು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಐದುನೂರರಿಂದ ಒಂದು ಸಾವಿರ ಬೋರ್‌ವೆಲ್ಸ್ ಇವೆ. ಒಂದು ಪೋಲ್ ಎರಡು ಪೋಲ್‌ಗೋಸ್ಕರ ಎರಡು ಮೂರೂವರೆ ವರ್ಷದಿಂದ ಎನರ್‌ಜೈಸ್ ಆಗದೇ ಇದೆ. ವಿರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಬಹಳ ಕಳಕಳಿಯಿಂದ ಮನವಿ ಮಾಡಿಕೊಂಡೆ. ಕನಿಷ್ಠಪಕ್ಷ ಒಂದು ಪೋಲ್ ಇರುವಂತಹದಕ್ಕಾದರೂ ಎನರ್‌ಜೈಸ್ ಮಾಡಿರಿ ಎಂದು ಒತ್ತಾಯ ಮಾಡಿದೆ. ನಮ್ಮ ಮಾತು ಸರಕಾರಕ್ಕೆ ಕೇಳಿಸುತ್ತದೆಯೋ ಇಲ್ಲವೋ ಎಂದು ಅರ್ಥವಾಗುತ್ತಿಲ್ಲ. ಈ ವರ್ಷ ಶರಾವತಿಯಲ್ಲಿ ಸಾಕಷ್ಟು ನೀರು ಇದೆ ಎಂದು ಗೊತ್ತಿದೆ. ಕೆ.ಇ.ಬಿ.ಯವರು ಏನು ಮಾಡುತ್ತಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಒಂದು ಪೋಲ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮೇಟಿರಿಯಲ್ಸ್ ಇಲ್ಲ ಎಂದು ಅಲ್ಲಿ ಹೇಳುತ್ತಾರೆ ಇಲ್ಲಿ ವಿಧಾನಸಭೆಯಲ್ಲಿ ಕೇಳಿದರೆ ನಮ್ಮ ಹಣಕಾಸಿನ ಅನುಕೂಲ ಚೆನ್ನಾಗಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಅಂದರೆ ಸರಕಾರಿ ಅಧಿಕಾರಿಗಳಿಗೆ ಸಂಬಳ ಕೊಟ್ಟುಕೊಂಡು ಕುಳಿತುಕೊಳ್ಳುರುದಕ್ಕಾ ನೀರು ಇರುವುದು. ಅದು ಘಂಟೆಗಳ ಕಾಲ ಷಟ್‌ಹೌಸ್ ಮಾಡುವುದರಿಂದ ಏನಾಗುತ್ತದೆ ಎಂದರೆ ಇವತ್ತು ಮಳೆಯಾಗಿಲ್ಲ ಅಲ್ಪಸ್ವಲ್ಪ ಸಾಲ ತೆಗೆದುಕೊಂಡು ಬಂದು ಕೈಬೆಳೆ ಹಾಕಿ ಕೊಂಡಿದ್ದಾರೆ ಅದೂ ಸರ್ವನಾಶವಾಗುತ್ತಿದೆ. ಅದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಇದರ ಬಗ್ಗೆ ಒಂದು ಸದನದ ಸಮಿತಿ ಮಾಡಿ ಏನೂ ತೊಂದರೆ ಇಲ್ಲ. ಕೆ.ಇ.ಬಿ. ಬಗ್ಗೆ ನಿಮಗೆ ಕಳಕಳಿ ಇಲ್ಲ ಎಂದು ನಾನು ಹೇಳುವುದಿಲ್ಲ. ಇರಬಹುದು ಆದರೆ ಕಾರ್ಯತಹ ಒಂದು ವರ್ಷದಲ್ಲಿ ಏನಾಗಿದೆ ತೋರಿಸಿ ಕೆ.ಇ.ಬಿ. ಪಂಕ್ಷನಿಗ್ ಮತ್ತು ಡಿಸ್ಟ್ರಿಬ್ಯೂಷನ್‌ನಲ್ಲಿ ಏನೇನೂ ಇಂಪ್ರೂವ್‌ಮೆಂಟ್ ಆಗುತ್ತಿಲ್ಲ. ವಿದ್ಯುಚ್ಛಕ್ತಿ ಷಟ್‌ಡೌನ್ ಮಾಡುವುದರಿಂದ ರೈತರಿಗೆ ಬಹಳ ದೊಡ್ಡ ಪೆಟ್ಟಾಗುತ್ತದೆ. ಸರಕಾರ ತೀವ್ರವಾಗಿ ಅದಷ್ಟು ಬೇಗ ಇದರ ಕಡೆ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ ಇವತ್ತು ನಮಗೆ ಬಹಳ ತಲೆಹೊರೆಯಾಗಿ ನಿಂತಿರತಕ್ಕಂಥ ಒಂದು ಸಂಸ್ಥೆ ಇದ್ದರೆ ಅದು ಕೆ.ಇ.ಬಿ. ಎಂದು ಹೇಳುವುದಕ್ಕೆ ಸಿದ್ದವಾಗಿದ್ದೇನೆ. ಏಕೆಂದರೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡಬೇಕೆಂದು ಒಂದು ಅಭಿಪ್ರಾಯವನ್ನು ನಮ್ಮ ಮಾನ್ಯ ಮಂತ್ರಿಗಳು ಹೇಳಿದರೂ ಕೂಡಾ ಅನೇಕ ಕಡೆಗಳಲ್ಲಿ ಇದರ ಬಗ್ಗೆ ಕೆ.ಇ.ಬಿ.ಯವರು ಬಹಳ ಉದಾಸೀನ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾದರೆ ನಮ್ಮ ರೈತರು ಅಕ್ಕಿ, ಗೋಧಿ, ರಾಗಿ ಮುಂತಾದ ಯಾವುದೇ ಪದಾರ್ಥಗಳನ್ನು ಬೆಳೆಸಿ ನಮ್ಮ ಜನತೆಗೆ ಒದಗಿಸುವುದು ಹೇಗೆ ಎಂಬ ದೊಡ್ಡ ವಿಚಾರವೇ ನಮ್ಮ ಮುಂದೆ ನಿಂತಿದೆ. ನಮ್ಮ ಮಂಗಳೂರು ಮತ್ತು ಉಳ್ಳಾಲ ಕ್ಷೇತ್ರದಲ್ಲಿ ಆರು ಘಂಟೆ ನಿಲುಗಡೆ ಅಲ್ಲ ಸಾಧಾರಣ ಒಮ್ಮೊಮ್ಮೆ ಇಡೀ ರಾತ್ರಿ ವಿದ್ಯುಚ್ಛಕ್ತಿ ಇರುವುದಿಲ್ಲ. ಕೋಣಾಜೆಯಲ್ಲಿ ನಮ್ಮ ಒಂದು ಸ್ಟೇಷನ್ ಉಂಟು ಅಲ್ಲಿ ಒಬ್ಬ ಸಿಬಂಧಿ ಆಗುವವರೆಗೆ ನಮಗೆ ಇದೇರೀತಿ ಮಾಡುವುದಕ್ಕೆ ಸಾಧ್ಯ ಹತ್ತು ಕಿಲೋಮೀಟರ್ ದೂರ ಹೋಗಿ ಸರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾರೆ. ಇಡೀ ರಾತ್ರಿ ನಮಗೆ ವಿದ್ಯುಚ್ಛಕ್ತಿ ಇಲ್ಲದಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಮಗೆ ಅನೇಕ ಕಡೆ ನಲ್ಲಿ ನೀರು ಯೋಜನೆ ಕೊಟ್ಟಿದ್ದಾರೆ. ಮನ್ನೂರಿನಲ್ಲಿ 10 ಲಕ್ಷ ರೂಪಾಯಿ ಖರ್ಚು ಮಾಡಿ ಕೇಂದ್ರದ ದುಡ್ಡನ್ನು ಜಿಲ್ಲಾ ಪರಿಷತ್ ನವರು ಖರ್ಚು ಮಾಡಿ ನಲ್ಲಿ ನೀರಿನ ಯೋಜನೆ ಮಾಡಿದ್ದಾರೆ. ಅಲ್ಲಿ ಟ್ಯಾಂಕ್

ಇದೆ, ಪಂಪ್ ಜೋಡಿಸಿದೆ, ಆದರೆ ಅದಕ್ಕೆ ವಿದ್ಯುತ್ ಕೊಡದೇ ಇರುವುದರಿಂದ ಇಡೀ ಮನ್ನೂರು ಗ್ರಾಮ ಹಾಗೂ ಅದಕ್ಕೆ ಸೇರಿದ ಮದರಿ ನಗರ, ಸಂತೋಷ ನಗರಕ್ಕೆ ಸರಿಯಾಗಿ ನೀರು ಬರುತ್ತಿಲ್ಲ. ಅದೇ ರೀತಿ ಉಳ್ಳಾಲದಲ್ಲಿ ನಲ್ಲಿ ನೀರು ಯೋಜನೆ ಇದೆ. ಅದಕ್ಕೆ ಸಹ ವಿದ್ಯುತ್ ಸರಿಯಾಗಿ ಕೊಡದಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆಗೆ ಕಷ್ಟವಾಗುತ್ತಿದೆ. ಅದೇ ರೀತಿ ಕೋಟಗಾರು ಬಜಾರಿನಲ್ಲಿ ವಿದ್ಯುತ್ ಇಲ್ಲ. ಎಲ್ಲಾ ಕಡೆಗಳಲ್ಲಿ ವಿದ್ಯುತ್ ಇಲ್ಲ. ವಿದ್ಯುತ್ ನಿಂದ ಬಹಳ ತೊಂದರೆಯಾಗಿದೆ. ವಿದ್ಯುತ್‌ಕ್ಕಿ ಕಣ್ಣಾ ಮುಚ್ಚಾಲೆ ಆಟ ಆಡುತ್ತಿರುವುದನ್ನು ನೋಡಿದರೆ ಭಯಪಡುವಂತಾಗಿದೆ. ಸಾಧಾರಣವಾಗಿ ಹೇಳುವುದಾದರೆ ನಾವು ಯಾವುದಾದರೊಂದು ಸಮಾರಂಭದಲ್ಲಿ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವಂತಹ ಕಾಲದಲ್ಲಿ ಅಲ್ಲೂ ವಿದ್ಯುತ್ ಇಲ್ಲ. ಅದೇ ರೀತಿಯಲ್ಲಿ ಒಂದು ಮದುವೆ ಮಂಟಪದಲ್ಲಿ ವರ ಮತ್ತು ವಧುವಿಗೆ ಹೂಮಾಲೆ ಹಾಕುವಂತಹ ಸಂದರ್ಭದಲ್ಲಿ ವಿದ್ಯುತ್ಶಕ್ತಿ ಹೋಗುತ್ತದೆ. ಈ ಪರಿಸ್ಥಿತಿಯನ್ನು ನಾವು ದಿನನಿತ್ಯ ಕಾಣುತ್ತಿದ್ದೇವೆ. ಇದನ್ನು ಅಲ್ಪಗಳೆಯತಕ್ಕಂಥ ಮಾತು ಅಲ್ಲ. ನಾವು ಕೆ.ಇ.ಬಿ. ನಿಗಮದವರಿಗೆ ಈ ವಿಚಾರವನ್ನು ತಿಳಿಸಿದರೂ ಅವರು ಏನೂ ಮಾಡದೆ ತೆಪ್ಪಗೆ ಕುಳಿತುಕೊಂಡಿದ್ದಾರೆ. ಈ ವಿದ್ಯುಚ್ಛಕ್ತಿ ಬಗ್ಗೆ ಸರ್ಕಾರದವರು ಪ್ರಾಮುಖ್ಯತೆ ಕೊಟ್ಟು ವಿದ್ಯುತ್ಶಕ್ತಿ ಇಲಾಖೆಯವರು ಹೆಚ್ಚಿನ ಕೆಲಸ ಮಾಡಿದರೆ ಮಾತ್ರ ರೈತರಿಗೆ ಬಡವರಿಗೆ ಕೂಲಿಕಾರರಿಗೆ ಗ್ರಾಹಕರಿಗೆ ಅನುಕೂಲ ಮಾಡಲು ಸಾಧ್ಯ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ನಿವೇದಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದಂತೆ ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಪ್ರಥಮ ಘಟಕ ಪ್ರಾರಂಭವಾಗಿದ್ದು ಅದರ ಜೊತೆಯಲ್ಲಿಯೇ ಎರಡನೆ ಘಟಕ ಪ್ರಾರಂಭದ ಹಂತದಲ್ಲಿ ಇದೆ. ಆದರೆ ಇಲ್ಲಿ ಈಗ ಪ್ರಥಮ ಘಟಕದಲ್ಲಿ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆಯೋ ಅಷ್ಟೂ ವಿದ್ಯುತ್‌ನ್ನು ಉಪಯೋಗಿಸದೇ ಇರುವ ವಿಚಾರವನ್ನು ನಾವು ತಿಳಿದುಕೊಂಡಿದ್ದೇವೆ. ಇನ್ನು ಎರಡನೇ ಘಟಕ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿದ್ದರೂ ಅಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಪಂಪ್ ಸೆಟ್ ಗಳಿಗೆ ವಿದ್ಯುತ್ ಅಳವಡಿಸುವ ಸಲುವಾಗಿ ಅನೇಕ ವರ್ಷಗಳಿಂದ ಅರ್ಜಿ ಹಾಕಿ ರೈತರು ಕಾಯುತ್ತಿದ್ದಾರೆ. ರೈತರು ಪಂಪ್ ಸೆಟ್‌ಗಳಿಗೆ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ಬಡ್ಡಿ ಕಟ್ಟುತ್ತಿದ್ದಾರೆ. ಆದರೆ ಅವರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಮತ್ತು ತಮಗೆ ಗೊತ್ತಿರುವ ಹಾಗೆ ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ಹರಿಜನ ಮತ್ತು ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ನಾವು ಸಾಲ ಸೌಲಭ್ಯಗಳನ್ನು ಕೊಡುವ ಯೋಜನೆಗಳನ್ನು ಮಾಡಿಕೊಟ್ಟಿದ್ದರೂ ಸಹ ಅವರಿಗೆ ಸಕಾಲದಲ್ಲಿ ವಿದ್ಯುತ್ ಸೌಲಭ್ಯ ಸಿಕ್ಕದೆ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಅದಷ್ಟು ಬೇಗ ಇಂತಹ ಆದ್ಯತಾ ವಲಯಗಳಿಗೆ ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೇ ವಿದ್ಯುತ್ ಸಂಪರ್ಕ ನಿನ್ನೆ ಪತ್ರಿಕೆಗಳಲ್ಲಿ ಓದಿದ ಮೇಲೆ ಬಹಳ ಜನರಿಗೆ ಇವರು ಶಾಕ್ ಹೊಡೆಸಿದ್ದಾರೆ. ಕಳೆದ ವರ್ಷ ಒಂದು ಮೂಟೆ ಅಲೂಗಡ್ಡೆ

ಬಿತ್ತನೆಗೆ 1500 ರೂ ಇದ್ದಿದ್ದು ಈ ವರ್ಷ 800 ರೂಪಾಯಿಗಳು ಆಗಿದೆ. ಆ 800 ರೂಪಾಯಿಗಳನ್ನು ಕೊಟ್ಟು ಬಿತ್ತನೆ ಆಲೂಗಡ್ಡೆ ತಂದು ಬಿತ್ತನೆ ಮಾಡಿದ್ದಾನೆ ರೈತ ಆ ಆಲೂಗಡ್ಡೆಗೆ ರಾತ್ರಿ ಹೊತ್ತು ನೀರು ಕಟ್ಟುವುದಕ್ಕೆ ಆಗುವುದಿಲ್ಲ. ಎರಡು ಅಡಿ ದೋಣಿ ಇದ್ದರೆ ಮುಸುಕಿನ ಜೋಳ ತರಕಾರಿ ಇತ್ಯಾದಿಗಳಿಗೆ ರಾತ್ರಿ ಹೊತ್ತು ನೀರು ಕಟ್ಟಬಹುದು. ಆದರೆ ಇದಕ್ಕೆ ಮಾತ್ರ ಆಗುವುದಿಲ್ಲ ಇವತ್ತು ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವತಕ್ಕಂಥ ಆಲೂಗಡ್ಡೆ ಬೆಳೆ ಇದೆ ಅವರ ಗತ ಏನು? ಎರಡನೇಯದಾಗಿ 6 ಗಂಟೆ ವಿದ್ಯುತ್ ನಿಂತರೂ ಸಹ ಇನ್ನುಳಿದ 18 ಗಂಟೆಗಳ ಕಾಲ ಸತತವಾಗಿ ವಿದ್ಯುತ್ ಕೊಡುತ್ತೀರಿ ಎನ್ನುವ ಗ್ಯಾರೆಂಟಿ ಏನು? ಎಷ್ಟೋ ಸಾರಿ ವೋಲ್ಟೇಜ್ ಇರುವುದಿಲ್ಲ ವೋಲ್ಟೇಜ್ 350ಕ್ಕಿಂತ ಕಡಿಮೆ ಇದ್ದರೆ ಬೊರ್‌ವೆಲ್ ಪಂಪ್‌ಸೆಟ್‌ಗಳು ಪಂಪ್‌ಸೆಟ್ಟುಗಳು ನಡೆಯುವುದಿಲ್ಲ 180 ರಷ್ಟು ವೋಲ್ಟೇಜ್ ಕೆಪ್ಯಾಸಿಟಿ ಇದ್ದರೆ ಬೋರ್‌ವೆಲ್ ನಡೆಯುವುದಿಲ್ಲ ಆಗ ಮೋಟರ್ ಹಾಕಿದರೆ ಮೋಟಾರ್ ಸುಟ್ಟು ಹೋಗುತ್ತದೆ. ಇಲ್ಲ ಸ್ವಿಚ್ ಬೋರ್ಡ್ ಸುಟ್ಟು ಹೋಗುತ್ತದೆ. ಈ ಟ್ರಾನ್ಸ್‌ಫಾರ್ಮರ್ಸ್ ಬದಲಾವಣೆ ಮಾಡಿ ಎಂದು ಎಷ್ಟೋ ವರ್ಷಗಳಿಂದ ನಾವು ಹೇಳುತ್ತಿದ್ದೇವೆ ಆದರೂ ಬದಲಾವಣೆ ಮಾಡಲಿಲ್ಲ. ಇದರ ಜೊತೆಗೆ ವೋಲ್ಟೇಜ್ ಸರಿಯಾಗಿ ಇಲ್ಲದೆ ಇರುವುದರಿಂದ ಇವುಗಳನ್ನು ಸ್ಟಾಪ್‌ಆಫ್ ಮಾಡಿ ಎಂದು ಹೇಳಿದರೂ ಸಹ ಅದನ್ನು ಮಾಡಿಲ್ಲ. ನಮಗೆ ಈಗ ಹೆದರಿಕೆ ಬಂದಿದೆ. ಈಗ ನಾನು ನನ್ನದೆ ಒಂದು ಉದಾಹರಣೆ ಕೊಡುತ್ತೇನೆ. ಪವರ್‌ಸಪ್ಲೈ ಸರಿಯಾಗಿ ಆಗುವುದಿಲ್ಲ ಎಂದು ನಾನು 40 ಕೆವಿ ಒಂದು ಜನರೇಟರ್ ತಂದು ಇಟ್ಟುಕೊಂಡೆ ಅದಕ್ಕೆ ಈಗ ಡೀಜಲ್ ಸಿಕ್ಕುವುದಿಲ್ಲ ನನ್ನದ್ದು ಸುಮಾರು ಐದೂವರೆ ಲಕ್ಷ ರೂಪಾಯಿಗಳ ಸಾಲ ಪಿ.ಎಲ್.ಡಿ. ಬ್ಯಾಂಕಿನಲ್ಲಿದೆ. ನನ್ನ ಗತಿ ಏನು? ಈಗ ಒಪನ್ ವೆಲ್‌ಗಳಲ್ಲಿ ಒಂದು ಹನಿ ನೀರು ಇಲ್ಲ. ಒಂದೂವರೆ ವರ್ಷದಿಂದ ಮಳೆ ಸರಿಯಾಗಿ ಆಗಿಲ್ಲ. ಆಮೇಲೆ ಒಂದು ಕೆರೆಯಲ್ಲೂ ಸಹ ಹಕ್ಕಿಗಳು ಕುಡಿಯಲು ನೀರು ಒಂದು ತೊಟ್ಟು ಇಲ್ಲ ಇಂತಹ ಪರಿಸ್ಥಿತಿಯಲ್ಲಿ ನೀವು 6 ಗಂಟೆ ವಿದ್ಯುತ್ ನಿಲ್ಲಿಸಿದರೆ ರೈತರ ಗತಿ ಏನು? ಜನಗಳ ಎಕಾನಮಿಕ್ ಪೊಜಿಷನ್ ಏನಾಗಬೇಕು. ಇದನ್ನೆಲ್ಲಾ ತಾವು ಸ್ವಲ್ಪ ದಯಮಾಡಿ ಯೋಚನೆ ಮಾಡಿ ತಾವು ಬೇರೆ ಇಂಡಸ್ಟ್ರಿಗಳಿಗೆ ಕೊಡುವ ವಿದ್ಯುತ್‌ನ್ನು ಕಡಿಮೆ ಮಾಡಿ ಪರವಾಗಿಲ್ಲ. ನನ್ನ ಜಿಲ್ಲೆಯಲ್ಲಿ 5-6 ವರ್ಷಗಳಿಂದ ಮಳೆ ಇಲ್ಲ. ನಮ್ಮ ಜಿಲ್ಲೆಯಲ್ಲಿ ಪವರ್ ಸರಿಯಾಗಿ ಸಪ್ಲೈ ಮಾಡದಿದ್ದರೆ ನಾವೆಲ್ಲ ಸಂಪೂರ್ಣವಾಗಿ ನಿರ್ನಾಮವಾಗಿ ಹೋಗುತ್ತೇವೆ. ನಾವು ಇನ್ನು ಯಾವತ್ತೂ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಈ ಕಡೆ ತಾವು ಸ್ವಲ್ಪ ಹೆಚ್ಚು ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ) : ಸನ್ಮಾನ್ಯ ಅಧ್ಯಕ್ಷರೇ ಈ ವಿದ್ಯುತ್ ಅಭಾವವನ್ನು ನಾವು ಕಾಣುತ್ತಿದ್ದೇವೆ. ದಿನದಲ್ಲಿ 5-6 ಗಂಟೆಗಳ ಕಾಲ ವಿದ್ಯುತ್ ಹೋದರೆ ಪರವಾಗಿಲ್ಲ ಆದರೆ ಹೆಚ್ಚಿನ ವೇಳೆ ವಿದ್ಯುತ್ ಹೋಗಿಬಿಡುತ್ತೆ. ಹೆಚ್ಚಿನ ಸಂದರ್ಭಗಳಲ್ಲಿ ವಿದ್ಯುತ್‌ನ್ನು ಸರಿಯಾಗಿ ಒದಗಿಸಲಿಕ್ಕೆ ಇಲಾಖೆ ವಿಫಲವಾಗಿ ಇದಕ್ಕಿಂತ ಹೆಚ್ಚು ಮಂಗಳೂರಿನಲ್ಲಿ ಕಾವರು ಎಂಬಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಕೆಟ್ಟುಹೋಗಿದೆ. ಇದರಿಂದ ಇಡಿ ಜಿಲ್ಲೆಗೆ ತೊಂದರೆಯಾಗುತ್ತಿದೆ. ಅದನ್ನು

ಜೋಡಿಸಲಿಕ್ಕೆ ಅವರಿಗೆ 2-3 ತಿಂಗಳ ಕಾಲಾವಧಿ ಬೇಕಾಗಿದೆ. ಎಸ್.ಜಿ.ಇ.ಎಫ್. ನಿಂದ ಬಿಡಿ ಬಿಡಿಯಾಗಿ ಮೆಟೀರಿಯಲ್‌ನ್ನು ಮಂಗಳೂರಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅಸೆಂಬಲ್ ಮಾಡುವಂಥಾ ಒಂದು ಕೆಲಸ ಮಾಡಲಿಕ್ಕೆ ಎರಡು ಮೂರು ತಿಂಗಳು ಬೇಕೆಂದು ಹೇಳುತ್ತಿದ್ದಾರೆ. ಈ ರೀತಿ ಎರಡು ಮೂರು ತಿಂಗಳಾದರೆ ಈ ಬೇಸಿಗೆಯಲ್ಲಿ ರೈತರು ಎಲೆಕ್ಟ್ರಿಸಿಟಿಯನ್ನೇ ಅವಲಂಬಿಸಿ ಮಾಡುವಂಥ ಕಸೂಬುದಾರರಿಗೆ ತಮ್ಮ ಅವರು ಜೀವನ ಮಾಡುವಂತಾದ್ದು ಕಷ್ಟವಾಗುತ್ತದೆ ಅದಕ್ಕಾಗಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಅನ್ನುವಂತಾದ್ದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಇದನ್ನು ಆದಷ್ಟು ಬೇಗ ಜೋಡಿಸಬೇಕು. ಇನ್ನು ಕೇವಲ ನೀರನ್ನೆ ಅವಲಂಬಿಸಿಕೊಂಡು ವಿದ್ಯುತ್ತನ್ನು ನಾವು ತಯಾರು ಮಾಡುತ್ತೇವೆಂದರೆ ಈ ಶತಮಾನದಲ್ಲಿ ಮಾಡುವುದಿಲ್ಲ. ಇದು ಬಹಳ ಕಷ್ಟದ ಕೆಲಸ ಇದು ಆಗುವಂಥ ಕೆಲಸ ಅಲ್ಲ. ಆದ್ದರಿಂದ ಇದಕ್ಕೆ ಬದಲಿ ವ್ಯವಸ್ಥೆ ಸರ್ಕಾರ ಏನು ಮಾಡುತ್ತದೆ? ಸಣ್ಣ ವಿದ್ಯುತ್ ಸ್ಥಾವರಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ಕಡೆ ಸ್ಥಾಪನೆ ಮಾಡಬಹುದು. ಆ ಭಾಗದ ಸಣ್ಣ ಸಣ್ಣ ಜಲಪಾತಗಳನ್ನು ಉಪಯೋಗ ಮಾಡಿಕೊಂಡು ಮಿನಿ ಪ್ರಾಜೆಕ್ಟ್‌ಗಳನ್ನು ತಯಾರು ಮಾಡಬಹುದು. ಇದರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕು. ಅಲ್ಲದೆ ಥರ್ಮಲ್ ಪ್ರಾಜೆಕ್ಟ್‌ಗಳನ್ನು ಆದಷ್ಟು ಬೇಗ ಮಾಡಬೇಕು. ನಂಡಿಕೋಡ್‌ನಲ್ಲಿ ಪ್ರಾರಂಭ ಮಾಡುವಂಥ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ರಾಯಚೂರಿನಲ್ಲಿರುವಂಥ ಥರ್ಮಲ್ ಪ್ರಾಜೆಕ್ಟ್ ಅಗಲೀ ಬದಲಿ ವ್ಯವಸ್ಥೆಯನ್ನು ಮಾಡುವಾಗ ನಮ್ಮಲ್ಲಿ ಏನಾಗುತ್ತಿದೆ ಅಂದರೆ ಅಣು ಸ್ಥಾವರಗಳನ್ನು ನಾವು ವಿರೋಧ ಮಾಡುತ್ತೇವೆ. ಈ ಕಡೆ ಕರೆಂಟ್ ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಈ ದ್ವಂದ್ವ ನೀತಿ ಸರಿಯಾದುದಾಗವುದಿಲ್ಲ. ಇದಕ್ಕಾಗಿ ಬದಲಿ ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಮೆಟೀರಿಯಲ್ಸ್ ಸರಬರಾಜು ಮಾಡುವಂಥಾದ್ದು ಆಗಬೇಕು ಈಗ ಕಂಬ ಹಾಕಿಬಿಟ್ಟಿದ್ದಾರೆ ಅಲ್ಲಿ ವೈರ್‌ಗಳ ಸಪ್ಲೈ ಇಲ್ಲ. ಮೆಟೀರಿಯಲ್ ಸಪ್ಲೈ ಇಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ನಾನು ತಿಳಿಯುವುದಕ್ಕೆ ನಾನು ಇಷ್ಟಪಡುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ರೂರಲ್): ಮಾನ್ಯ ಸಭಾಧ್ಯಕ್ಷರೇ ಈ ವಿಷಯವನ್ನು ನಾವು ಕಳೆದ 7 ವರ್ಷಗಳಿಂದ ಚರ್ಚೆ ಮಾಡುತ್ತಿದ್ದೇವೆ. 83 ರಿಂದ ಅಂದರೆ ಬರಗಾಲ ಬಂದಾಗಿನಿಂದ.ಎಲ್ಲಾ ಸರ್ಕಾರಗಳು ಪಂಚೇಂದ್ರಿಯಗಳೇ ಇಲ್ಲದ ಹಾಗೆ ಕೆಲಸ ಮಾಡುತ್ತಿವೆ.

ಅಧ್ಯಕ್ಷರು : ಏನಂದ್ರಿ?

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಪಂಚೇಂದ್ರಿಯಗಳನ್ನೇ ಸರ್ಕಾರಗಳು ಕಳೆದು ಕೊಂಡಿವೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಗ್ರಾಮಾಂತರ ಪ್ರದೇಶದ ಜ್ಞಾನವೇ ಇಲ್ಲ ಎನ್ನುವ ರೀತಿಯಲ್ಲಿ ಈ ಸರ್ಕಾರಗಳು ಕೆಲಸ ಮಾಡುತ್ತಿವೆ. ವಿದ್ಯುಚ್ಛಕ್ತಿ ನಿಲುಗಡೆ ಟೈಮ್ ಏನಿದೆ? ಬೆಳಿಗ್ಗೆ 6 ರಿಂದ 12ಕ್ಕೆ ಮತ್ತೆ 12 ರಿಂದ 6ಕ್ಕೆ ತಾವೂ ಗ್ರಾಮಾಂತರ ಪ್ರದೇಶದಿಂದ ಬಂದವರು. ಕಬ್ಬಿನ ಪ್ರದೇಶ ಈ 7 ವರ್ಷಗಳಲ್ಲಿ ನಿಮ್ಮ ಜಿಲ್ಲೆಯಲ್ಲೇ ರಾತ್ರಿ ಹೊತ್ತು ನೀರು ಹಾಯಿಸುವುದಕ್ಕೆ ಹೋದಂಥ ಹುಡುಗನ್ನು ಅವನ ಹೆಣ ವಾಸನೆ ಬಂದ ಮೇಲೆ ಕಬ್ಬಿನ ಗದ್ದೆಯಿಂದ ಈಚೆಗೆ ತಂದಿದ್ದು ತಮ್ಮ ಗಮನಕ್ಕೂ ಬಂದಿರಬಹುದು.ಸಾಮಾನ್ಯ

ಜ್ಞಾನ ಇರುವ ಸರ್ಕಾರವಾದರೆ 4 ಗೋಡೆ ನಡುವೆ ಕಾರ್ಖಾನೆಗಳು ಏನಿವೆಯಲ್ಲಾ ಅವನ್ನು ರಾತ್ರಿ ಹೊತ್ತು ಕೆಲಸ ಮಾಡಿ ಎಂದು ಹೇಳಿ. ರೈತರು ಹಗಲು ಹೊತ್ತು ಕೆಲಸ ಮಾಡಿ ಎಂದು ಹೇಳಿ ನೀವ್ಯಾರೂ ಗದ್ದೆಗೆ ಹೋಗಿಲ್ಲ. ನೀವ್ಯಾರೂ ನೀರು ಹಾಯಿಸಿಲ್ಲ ಅಲ್ಲಿ ರಾತ್ರಿ ಹೊತ್ತು ಏನಿವೆಯೆಂದು ನಿಮ್ಮ ಜ್ಞಾನಕ್ಕೆ ಇನ್ನು ಮೇಲಾದರೂ ಯೋಚನೆ ಮಾಡಿ ಸ್ವಲ್ಪ ಸಾಮಾನ್ಯ ಜ್ಞಾನ ಈ ಸರ್ಕಾರಕ್ಕೆ ಬರಬೇಕು. It should get some common sense. ಅಷ್ಟೇ ನಾನು ಹೇಳುವುದು.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಅಧ್ಯಕ್ಷರೇ ಈಗ ಸರ್ಕಾರವಾಗಲೀ ಯಾವುದೇ ಒಂದು ಇಲಾಖೆಯಾಗಲೀ ಏನಾದರು ಕ್ರಮ ತೆಗೆದುಕೊಂಡರೆ ಅದು ನೇರವಾಗಿ ರೈತರ ಮೇಲೆ ಹೊಡೆತ ಬೀಳುತ್ತದೆ. ವಿದ್ಯುಚ್ಛಕ್ತಿಯನ್ನು 6 ಗಂಟೆಗಳ ಕಾಲ ನಿಲುಗಡೆ ಮಾಡುವ ಬಗ್ಗೆ ಕೆಲವು ಸದಸ್ಯರು ಈಗಾಗಲೇ ಅಭಿಪ್ರಾಯ ಪಟ್ಟಂಥೆ ರೈತರುಗಳು ಏನು ಪಂಪುಸೆಟ್ಟುಗಳನ್ನು ಹೊಂದಿದ್ದಾರೆ ಅವರು ರಾತ್ರಿ ಹೊತ್ತು ಕೆಲಸ ಮಾಡುವುದಕ್ಕಾಗುವುದಿಲ್ಲ, ಹಗಲು ಹೊತ್ತು ಮಾತ್ರ ವಿದ್ಯುತ್ ರೈತರುಗಳಿಗೆ ಬಹಳ ಪ್ರಮುಖವಾದುದು. ಈ ರೀತಿ 6 ಗಂಟೆ ನಿಲುಗಡೆ ಮಾಡಲಿಕ್ಕೆ ಹೊರಟರೆ ಸನ್ಮಾನ್ಯ ಜಾಲಪ್ಪನವರು ಹೇಳಿದಹಾಗೆ 6 ಗಂಟೆ ಬಿಟ್ಟು ಇನ್ನು 18 ಗಂಟೆಗಳ ಕಾಲ ಕರೆಂಟ್ ಸರಿಯಾಗಿ ಕೊಡುತ್ತಾರೆಯೇ ಎನ್ನುವುದು ಸಾಭೀತಾಗಬೇಕು. ನಾನು ಉದಾಹರಣೆಗೆ ಹೇಳಬೇಕಾಗುತ್ತದೆ ಸುಮಾರು 10-15 ಕಿಲೋಮೀಟರ್ ಲೈನನ್ನು ಹಳ್ಳಿಗಳ ಮೇಲೆ ದಾರಿಗಳ ಮೇಲೆ ಎಳೆದಿರುತ್ತಾರೆ. ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಬೆಳಿಗ್ಗೆ 6 ಗಂಟೆಗೆ ಕರೆಂಟ್ ನಿಲ್ಲಿಸಿ ಮತ್ತೆ ಚಾರ್ಜ್ ಮಾಡಿದರೆ ಪುನಃ ಚಾರ್ಜ್ ಆಗುವುದಿಲ್ಲ, ಸಿಂಗಲ್ ಫೀಜ್ ಆಗುತ್ತದೆ. ನಮ್ಮ ಕಡೆಯೆಲ್ಲಾ ಮೂರು ಮೂರು ದಿವಸ ಕರೆಂಟ್ ಹೋಗುತಕ್ಕಂಥ ಪರಿಸ್ಥಿತಿ ನೋಡುತ್ತಿದ್ದೇವೆ.ಈ ಸಂದರ್ಭದಲ್ಲಿ ಕೆಲವರು ಜನರೇಟರುಗಳನ್ನು ಹಾಕಿಕೊಂಡಿರುವವರಿಗೆ ಡೀಸಲ್ ಇಲ್ಲದೆ ತೊಂದರೆಯಾಗುತ್ತಿದೆ. ಯಾವುದೇ ಬಂಕ್‌ಗೆ ಹೋದರೂ ಡೀಸಲ್ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನೋಡುತ್ತಿದ್ದೇವೆ. ಹೀಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಕಥೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕಂಥ ಸಣ್ಣ ಪುಟ್ಟ ಕೈಗಾರಿಕೆಗಳಿಗಂತೂ ಬಹಳ ಕಷ್ಟವಾಗಿದೆ. ನಾನೂ ಒಬ್ಬ ಸಣ್ಣ ಕೈಗಾರಿಕೆ ನಡೆಸತಕ್ಕವನು ನಮ್ಮ ಕೈಗಾರಿಕೆಯ ಕಥೆ ಎಷ್ಟಾಗಿದೆಯೆಂದರೆ

ಅಧ್ಯಕ್ಷರು : ಈಗ ಅವರು ಕೈಗಾರಿಕೆಗಳನ್ನು ಮುಚ್ಚಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಹೇಳಿದ್ದು ದೊಡ್ಡ ಕೈಗಾರಿಕೆಗಳು. ಉದಾಹರಣೆಗೆ ನನಗೆ ತಿಳಿದ ಮಟ್ಟಿಗೆ ಈ ರಾಜ್ಯದಲ್ಲಿ ದೊಡ್ಡ ದೊಡ್ಡ ಬೃಹತ್ ಕೈಗಾರಿಕೆಗಳಿಗೆ ನೇರವಾಗಿ ಕರೆಂಟನ್ನು ನಿಲುಗಡೆ ಇಲ್ಲದ ಮಟ್ಟದಲ್ಲಿ ಕೊಡತಕ್ಕಂಥದ್ದು ಸಹ ನಮ್ಮ ಗಮನಕ್ಕೆ ಬಂದಿದೆ ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ವಿದ್ಯುಚ್ಛಕ್ತಿ ವಿಚಾರದಲ್ಲಿ ಮೊನ್ನೆ ನಮ್ಮನ್ನೆಲ್ಲಾ ಒಂದು ಸಭೆಗೆ ಕರೆದಿದ್ದಾಗ ಈ ವಿಚಾರವನ್ನು ಸಹ ಅವರು ಪ್ರಸ್ತಾಪ ಮಾಡಿದ್ದೇವೆ. ಇಂತಹ ಬೃಹತ್ ಕೈಗಾರಿಕೆಗಳಿಗೆ ಕೊಟ್ಟಿರತಕ್ಕಂಥಹ ವಿದ್ಯುತ್ತನ್ನು ನಿಲುಗಡೆ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಆರು ಗಂಟಮಗಳ ಕಾಲ ವಿದ್ಯುತ್ ನಿಲುಗಡೆ ಮಾಡುದೆ ಪೂರ್ಣವಾಗಿ ವಿದ್ಯುತ್ತನ್ನು ಕೊಡತಕ್ಕ ಒಂದು ವ್ಯವಸ್ಥೆ ಮಾಡಬೇಕು ಎಂದು ನಮ್ಮ ಅನಿಸಿಕೆ ಆಗಿದೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ವಿದ್ಯುತ್ ನಿಲುಗಡೆ ಬಗ್ಗೆ ಸಾಕಷ್ಟು ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಗಮನಕ್ಕೆ ಒಂದು ಮುಖ್ಯವಾದ ವಿಚಾರವನ್ನು ತರುತ್ತಿದ್ದೇನೆ. ಮೂಡಿಗೆರೆ ಒಂದು ಪರಿವರ್ತಿತ ಮಂಡಲ. ಈ ಪರಿವರ್ತಿತ ಮಂಡಲದಿಂದ ವಿದ್ಯುಚ್ಛಕ್ತಿ ಇಲಾಖೆಗೆ ಸುಮಾರು ಎಂಟು ಲಕ್ಷ ರೂಪಾಯಿ ಬಾಕಿ ಇದೆ ಎಂಬ ಒಂದೇ ಕಾರಣಕ್ಕಾಗಿ ವಿದ್ಯುತ್ ನಿಲುಗಡೆ ಮಾಡಿದ್ದಾರೆ. ಇದರಿಂದಾಗಿ ಕುಡಿಯುವ ನೀರಿಗೆ ಹಾಗೂ ನಗರಕ್ಕೆ ಇದ್ದಂತಹ ವಿದ್ಯುತ್ತನ್ನು ನಿಲ್ಲಿಸಿಬಿಟ್ಟಿರುವುದರಿಂದ ತೊಂದರೆ ಆಗಿದೆ. ಮೂರು ದಿವಸದಿಂದ ಅಲ್ಲಿ ಚುನಾಯಿತ ಪ್ರತಿನಿಧಿಗಳು ಉಪಾವಾಸ ಮುಷ್ಕರ ಮಾಡುತ್ತಿದ್ದಾರೆ. ಇದಕ್ಕೆ ಬಹುತೇಕ ಕಾರಣ ಎಂದರೆ ಇದು ಹಿಂದೆ ಪುರಸಭೆ ಆಗಿತ್ತು ಜಿಲ್ಲಾ ಪರಿಷತ್ ಶಾಸನದಿಂದಾಗಿ ಪರಿವರ್ತಿತ ಮಂಡಲ ಆಯಿತು. ಈ ಪರಿವರ್ತಿತ ಮಂಡಲ ಅಂದರೆ ಮಂಡಲಗಳಿಗೆ ಯಾವ ಒಂದು ನಿಯಮವನ್ನು ಅನುಸರಿಸಬೇಕು ಆ ನಿಯಮ ಇಲ್ಲ, ಪುರಸಭೆ ಆದರೆ ತಾವು ಅಕ್ಟಾಯ್ ವಜಾ ಮಾಡಿದ್ದರ ಒಂದು ಪರಿಹಾರದ ಹಣ ಕೊಡುತ್ತಿದ್ದಿರಿ. ಈಗ ಕೊಡುತ್ತಾ ಇಲ್ಲ, ಈಗ ಪರಿವರ್ತಿತ ಮಂಡಲ ಎಂಬ ಕಲ್ಪನೆಯೇ ಇಲ್ಲವೇ ವಿದ್ಯುಚ್ಛಕ್ತಿ ಯನ್ನು ನಿಲ್ಲಿಸಿಬಿಟ್ಟರೆ ಮೂಡಿಗೆರೆಯಲ್ಲಿ ಮೂರು ದಿವಸದಿಂದ ಕುಡಿಯುವುದಕ್ಕೆ ನೀರು ಸಿಗುತ್ತಾ ಇಲ್ಲ ದಯಮಾಡಿ ಇದರ ಬಗ್ಗೆ ಸೂಕ್ತವಾದ ಒಂದು ಆದೇಶವನ್ನು ಸರ್ಕಾರ ಹೊರಡಿಸಬೇಕು. ತಕ್ಷಣ ಅಲ್ಲಿಗೆ ವಿದ್ಯುತ್ತನ್ನು ಕೊಡತಕ್ಕ ವ್ಯವಸ್ಥೆಗೆ ತಾವು ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೇ ಈಗಾಗಲೇ ನನ್ನ ಮಿತ್ರರು ವಿದ್ಯುತ್ ಕಟ್ ಬಗ್ಗೆ ಮಾತನಾಡಿದ್ದಾರೆ. ನನಗೆ ಆಶ್ಚರ್ಯ ಆಗುತ್ತದೆ. ಏಕೆಂದರೆ ಕಾಳಿ ಮತ್ತು ಶರಾವತಿಯಲ್ಲಿ ಏನು ಒಂದು ವಾಟರ್ ಲೆವೆಲ್ ಇತ್ತು ಅದಕ್ಕಿಂತ ಈ ವರ್ಷ ಹೆಚ್ಚು ಆಗಿದೆ. ಮತ್ತು ವಾರಾಹಿ ಸಹಿತ ಈ ವರ್ಷ ಹೊಸದಾಗಿ ಶುರು ಆಗಿದೆ. ಸರ್ಕಾರ ಬೇರೆ ರಾಜ್ಯಗಳಿಂದ ವಿದ್ಯುತ್ತನ್ನು ತೆಗೆದುಕೊಳ್ಳುತ್ತದೆ. ಹೀಗಿದ್ದಾಗ ಏಕಾಏಕಿ ವಿದ್ಯುತ್ತನ್ನು ಕಡಿತ ಮಾಡಿದ್ದರಿಂದ ಇವತ್ತು ರಾಜ್ಯದ ರೈತರಿಗೆ ಸಾಕಷ್ಟು ಹಾನಿ ಆಗಿದೆ. ಕೆಲವು ಮಿತ್ರರು ಹೇಳಿದರು. ಇವತ್ತು ಕೈಗಾರಿಕೆಗೆ ಕೊಡತಕ್ಕಂಥಹ ವಿದ್ಯುತ್ತನ್ನು ನಿಲ್ಲಿಸಬೇಕು ಎಂದು. ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲ, ಸ್ವಲ್ಪ ಪ್ರಮಾಣದಲ್ಲಿ ಕಡಿತ ನಿರ್ಮಾಣ ಆಗಬಹುದು. ಟೋಟಲ್ ಆಗಿ ಅಲ್ಲಿ ಸ್ಟಾಪ್ ಮಾಡಿದರೆ ಅಲ್ಲಿ ಒಂದು ದೊಡ್ಡ ಸಮಸ್ಯೆ ನಿರ್ಮಾಣ ಆಗಬಹುದು. ಆದ್ದರಿಂದ ಸರ್ಕಾರ ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಪ್ರೊಫೆಸರ್ ನಂಜುಂಡಸ್ವಾಮಿಯವರಂತಹ ರೈತ ಮುಖಂಡರನ್ನು ಕರೆದು ಚರ್ಚೆ ಮಾಡಿ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಯಾವ ಪ್ರಕಾರ ಸರ್ಕಾರಕ್ಕೆ ನಿಜವಾಗಿ ತೊಂದರೆ ಇದ್ದರೆ ಯಾವ ಪ್ರಕಾರ ರೈತರಿಗೆ ಸಹಾಯ ಆಗುವಂತೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಮತ್ತೊಂದು ಮಾತು ಎಂದರೆ ಮುಂಜಾನೆ ಆರು ಗಂಟೆಗೆ ವಿದ್ಯುತ್ ನಿಲುಗಡೆ ಆದರೆ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯೆಯನ್ನು ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೆ ಸಹ ಈ ವಿದ್ಯುತ್ ಕಡಿತದಿಂದ ಪರಿಣಾಮ ಆಗುತ್ತದೆ. ಆದಷ್ಟು ಬೇಗನೇ ಈ ಕಡಿತವನ್ನು ವಾಪಸ್ ತೆಗೆದುಕೊಳ್ಳಬೇಕು ಅಥವಾ ತೊಂದರೆ ಇದ್ದರೆ ಕೊನೆಯಪಕ್ಷ ಚರ್ಚೆ ಮಾಡಿ

ಯಾವ ಪ್ರಾಕಾರ ಪರಿಹಾರ ಕಂಡು ಹಿಡಿಯಲಿಕ್ಕೆ ಸಾಧ್ಯ ಅದನ್ನು ಮಾಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡತ್ತೇನೆ.

+ ಶ್ರೀಮತಿ ಮೋಟಮ್ಮ (ಮೂಡಗೆರೆ) : ಅಧ್ಯಕ್ಷರೇ ಈಗ ಕೆ.ಇ.ಬಿ.ನಿಂದ ಆಗುತ್ತಿರುವ ತೊಂದರೆ ಬಗ್ಗೆ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ತಾಲ್ಲೂಕಿನ ಬಗ್ಗೆ ಮಾತನಾಡಿರುವುದು ಸತ್ಯ ಸಂಗತಿ ಆಗಿದೆ. ನಾನು ನಿನ್ನೆ ಹೋಗಿ ಅವರ ಜೊತೆ ಕುಳಿತು ಚರ್ಚೆ ಮಾಡಿ ಈ ತರಹ ಪರಿಸ್ಥಿತಿ ಆಗಿದೆ ಕಾಲ್ ಆಟೆನ್‌ಷನ್ ಇಲ್ಲ 334 ಹಾಕುವ ಹಾಗೆ ಇಲ್ಲ ಇದರ ಬಗ್ಗೆ ಏನು ಮಾಡುವುದು? ಎಂದು ಕೇಳಿದೆ. ತಾವು ಈಗ ಕೆ.ಇ.ಬಿ. ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದು ನಮಗೆ ಅನುಕೂಲ ಆಗಿದೆ. ನಮ್ಮ ಮೂಡಿಗೆರೆ/ ಮಧ್ಯಕಾಲಿಕ ಮಂಡಲ ಅಲ್ಲಿ 8 ಲಕ್ಷ ರೂಗಳು ಹಿಂದಿನಿಂದ ಕೊಡಬೇಕಾದ ಬಾಕಿ ಆಗಿಉಳಿದಿದೆ ಈಗ ಸಡನ್ ಆಗಿ ಅಲ್ಲಿ ವಿದ್ಯುತ್ ಕಡಿತ ಮಾಡಿರುವುದರಿಂದ ಕಷ್ಟ ಆಗಿದೆ. ಲೈಟ್ ಇಲ್ಲದೇ ಇದ್ದರೆ ಪರಿಸ್ಥಿತಿ ಹೇಗೆ ಆಗಬಹುದು ಒಂದು ವೇಳೆ ಲೈಟ್ ಇರುವಂತಹ ಸಂದರ್ಭದಲ್ಲಿ ಅಂಗಡಿಗಳಿಗೆ ನುಗ್ಗಿ ಕೆಲವು ಸಾಮಾನುಗಳನ್ನು ಹೊತ್ತುಕೊಂಡು ಹೋಗುವಂತಹ ಪರಿಸ್ಥಿತಿ ಇರುತ್ತದೆ. ಈಗ ಕರೆಂಟ್ ಇಲ್ಲದೇ ಇರುವುದರಿಂದ ಕುಡಿಯುವ ನೀರಿಗೂ ತೊಂದರೆ ಆಗಿದೆ. ಈ ಪರಿಸ್ಥಿತಿ ಇರುವಾಗ ಇದರ ಬಗ್ಗೆ ಸರ್ಕಾರ ಏನಾದರೂ ಒಂದು ನಿಲುವನ್ನು ತೆಗೆದುಕೊಳ್ಳಬೇಕು. ಒಮ್ಮೆ ಮುಖ್ಯಮಂತ್ರಿಗಳನ್ನು ಕಳೆದ ವಾರ ನಾನು ಭೇಟಿ ಮಾಡಿದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ಅಥಣಿ ತಾಲ್ಲೂಕಿನಲ್ಲಿ ಕೂಡ ಇದೆ ತರಹ ಮಧ್ಯಕಾಲಿಕ ಮಂಡಲ ಎಂದು ಬಾಕಿ ವಸೂಲಿಗಾಗಿ ಅಲ್ಲಿಯೂ ಸಹ ವಿದ್ಯುತ್ ಕಡಿತವನ್ನು ಮಾಡಿದ್ದಾರೆ ಎನ್ನುವಂತಹ ಪ್ರಸ್ತಾಪ ಬಂತು. ಇದು ಹೆಚ್ಚು ಕಡಿಮೆ ಮಧ್ಯ ಕಾಲಿಕ ಮಂಡಲ ಆಗಿರುವ ಎಲ್ಲ ಟೌನ್‌ಗಳಿಗೂ ಅನ್ವಯಿಸುತ್ತದೆ.

10.30 ಪಿ.ಎಂ

ಅದಕ್ಕೆ ಜನರಲ್ ಆಗಿ ಒಂದು ತಿಳಿವಳಿಕೆಯನ್ನು ನೀವು ಕೆ.ಇ.ಬಿ. ಅವರಿಗೆ ಕೊಡಬೇಕು ಕೆ.ಇ.ಬಿ. ಯವರ ಯಾವುದೇ ಬಾಕಿ ಇದ್ದರೂ ಕೂಡ ಅದನ್ನು ಕಂತು ಪ್ರಕಾರ ವಸೂಲು ಮಾಡಿ ಕೊಳ್ಳಲು ಸಾಧ್ಯವಿದೆ. ಅದನ್ನು ಬಿಟ್ಟು ವಿದ್ಯುಚ್ಛಕ್ತಿ ಕಡಿತ ಮಾಡಿದರೆ ಅದರಿಂದ ಏನೂ ಸುಧಾರಣೆ ಆಗುವುದಿಲ್ಲ ಮತ್ತು ಅದರಿಂದ ಹಣವೂ ಬರುವುದಿಲ್ಲ, ಜನರಿಗೆ ಮಾತ್ರ ತೊಂದರೆ ಕೊಟ್ಟಂತೆ ಆಗುತ್ತದೆ. ಆದುದರಿಂದ ದಯಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕು ಮತ್ತು ಅಲ್ಲಿಯ ಜನರಿಗೆ ಅನುಕೂಲ ಮಾಡಿಕೊಡ ಬೇಕು ಈಗಾಗಲೇ ಮೂಡಿಗೆರೆಯಲ್ಲಿ ಬಂದ್ ಆಚರಣೆ ಮಾಡುತ್ತಾ ಇದ್ದಾರೆಂದು ನನಗೆ ತಿಳಿಯಿತು. ಆದುದರಿಂದ ಅಲ್ಲಿನ ವಿದ್ಯುಚ್ಛಕ್ತಿ ಕಡಿತವನ್ನು ಕೂಡಲೇ ಹೋಗಲಾಡಿಸಿ ಅವರಿಗೆ ಒಂದು ಅನುಕೂಲಕರ ವ್ಯವಸ್ಥೆಯನ್ನು ಮಾಡಿಕೊಡ ಬೇಕೆಂದು ತನ್ಮೂಲಕ ಅಲ್ಲಿಯ ಜನರಿಗೆ ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕೂಡಲೇ ದೊರಕಿಸಿಕೊಡಬೇಕೆಂದೂ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಈ ಬಗ್ಗೆ ಒಂದು ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದರು. ಅವರಿಗೆ ಅವಕಾಶ ಕೊಡಿ

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಕೆ.ಇ.ಬಿ. ಯವರು ಕನೆಕ್ಷನ್ ತೆಗೆದುಕೊಳ್ಳ ಬೇಕಾದರೆ ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಯಾರು ಸಾಲ ತೆಗೆದುಕೊಂಡಿರುತ್ತಾರೆ ಅವರಿಗೆ ಅಧ್ಯತೆಯನ್ನು ಕೊಡುತ್ತಿದ್ದಾರೆ. ಉಳಿದವರಿಗೆ ಅಧ್ಯತೆಯು ಇಲ್ಲವಾಗಿದೆ. ರೈತರು ಯಾವ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದರೂ ಕೂಡ ಅವರಿಗೆ ಕನೆಕ್ಷನ್ ಸಿಗುವಂತಹ ವ್ಯವಸ್ಥೆಯಾಗ ಬೇಕೆಂದು ಹೇಳುತ್ತೇನೆ.

(ಶ್ರೀಮತಿ ಮೋಟಮ್ಮನವರು ತಮ್ಮ ಆಸನ ಬಿಟ್ಟು ಹೋಗುತ್ತಿದ್ದುದನ್ನು ಮಾನ್ಯ ಅಧ್ಯಕ್ಷರು ಗಮನಿಸಿದರು)

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರೇ ಮೂಡಿಗೆರೆ ಮಧ್ಯಂತರ ಮಂಡಲ ಪಂಚಾಯಿತಿಯ ವಿಚಾರವನ್ನು ಹೇಳಿ ತಮ್ಮ ಪುಸ್ತಕಗಳನ್ನು ಜೋಡಿಸಿಕೊಂಡು ಹೋಗುತ್ತಿದ್ದೀರಲ್ಲ ದಯಮಾಡಿ ಕುಳಿತುಕೊಳ್ಳಿ ಈಗ ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ

(ನಗು)

ಶ್ರೀ ಎಂ. ವೀರಪ್ಪ ಮೋಯಿಲಿ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ ಸದಸ್ಯರುಗಳು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ವಿದ್ಯುತ್ ನಿಲುಗಡೆಯ ಬಗ್ಗೆ ಮತ್ತು ಅದರಲ್ಲಿನ ಅನೇಕ ಲೋಪದೋಷಗಳ ಬಗ್ಗೆ ಬಹಳ ಗಂಭೀರವಾದಂಥ ಪ್ರಶ್ನೆಗಳನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರಾದ ಪ್ರೊಃ ನಂಜುಂಡಸ್ವಾಮಿಯವರು ಸರಕಾರಕ್ಕೆ ಜನ ಸಾಮಾನ್ಯರ ಪ್ರಶ್ನೆಗಳು ಸಮಸ್ಯೆಗಳು ಅರ್ಥವಾಗುತ್ತಾ ಇಲ್ಲ ಎಂದು ಹೇಳಿದ್ದಾರೆ. ಸರಕಾರಕ್ಕೆ ಜನಸಾಮಾನ್ಯರ ಎಲ್ಲಾ ಸಮಸ್ಯೆಗಳೂ ಅರ್ಥವಾಗುತ್ತಿವೆ

ಅಧ್ಯಕ್ಷರು: ಪ್ರೊ. ನಂಜುಂಡಸ್ವಾಮಿಯವರು ಸರಕಾರಕ್ಕೆ ಪಂಚೇಂದ್ರಿಯಗಳೇ ಇಲ್ಲ ಎಂದು ಹೇಳುತ್ತಿದ್ದಾರೆ. ನೀವು ಇದೆ ಎಂದು ಸ್ಪಷ್ಟಿಪಡಿಸಿ ಮಾಡುತ್ತಾ ಇದ್ದೀರಿ.

ಶ್ರೀ ವೀರಪ್ಪ ಮೊಯಿಲಿ: ಅದು ಅವರಿಗೆ ಗೊತ್ತಿದೆ ಈಗ ಸರಕಾರ ಸಮಗ್ರವಾಗಿ ಪರಿಶೀಲನೆ ಮಾಡುತ್ತಾ ಇದೆ ಈ ಬಗ್ಗೆ ಕುರಿತು ಅನೇಕ ಸಮಸ್ಯೆಗಳು ಇವೆ. 6 ಗಂಟೆಗಳ ವಿದ್ಯುತ್‌ಚ್ಛಕ್ತಿ ನಿಲುಗಡೆ ಪ್ರಶ್ನೆ ಮತ್ತು ಮಾನ್ಯ ಬೈರೇಗೌಡದ ಜಿಲ್ಲೆಯ ವಿಚಾರದಲ್ಲಿ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳು ಇವೆ. ಇಂಥ ಅನೇಕ ಸಮಸ್ಯೆಗಳು ಸರ್ವತ್ರಿಕವಾಗಿ ಇವೆ. ಅದೇ ಪ್ರಕಾರ ಕೆಲವು ಕಡೆಗಳಲ್ಲಿ ತೀಕ್ಷ್ಣವಾದಂಥ ಪ್ರಶ್ನೆಗಳು ಕೂಡ ಉದ್ಭವವಾಗಿದೆ. ಅದರ ಬಗ್ಗೆ ಈಗ ಎಲ್ಲಾ ರೀತಿಯ ವಿಶ್ಲೇಷಣೆ ಮಾಡಿ ಹೇಳಲು ನಾನು ಇಷ್ಟ ಪಡುವುದಿಲ್ಲ ಏಕೆಂದರೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಇದಕ್ಕೆ ವ್ಯವಸ್ಥಿತವಾದಂಥ ಕಾರ್ಯಕ್ರಮಗಳನ್ನು ರೂಪಿಸಬೇಕು ಅದನ್ನು ಹೈಯೆಸ್ಟ್ ಲೆವಲ್‌ನಲ್ಲಿ ಮಾನಿಟರ್ ಮಾಬೇಕೆಂದು ಹೇಳಿ ಸರಕಾರ ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಅದಕ್ಕಾಗಿ ನಾನು ಫೀಸ್ ಮೇಲ್ ಆಗಿ ಉತ್ತರ ಕೊಡುವ ಬದಲು ಈ ದಿನ ಒಂದು ಸದನ ಏಳುವ ಮೊದಲು ವಿವರವಾದಂಥ ಒಂದು ಹೇಳಿಕೆಯನ್ನು ಈ ಸದನಕ್ಕೆ ಕೊಡುತ್ತೇನೆ.

ಎನ್.ಜಿ.ಇ.ಎಫ್. ಹಗರಣದ ಬಗ್ಗೆ

ಶ್ರೀ ಸಿ ಬೈರೇಗೌಡ : ಮಾನ್ಯ ಅಧ್ಯಕ್ಷರೆ ನಿಯಮ 68ರ ಮೇರೆಗೆ ನಮ್ಮ ರಾಜ್ಯದಲ್ಲಿರತಕ್ಕಂಥ ಸರಕಾರಿ ಸ್ವಾಮ್ಯದ ಉದ್ದಿಮೆ ಆದ ಎನ್.ಜಿ.ಇ.ಎಫ್. ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಂಡಿದ್ದೆ. ಅದಕ್ಕೆ ನಮ್ಮ ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು